# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 340
2) ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 10-12-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದಲ್ಲಿ ನೀಲಿ ಕ್ರಾಂತಿ ಯೋಜನೆ ಮತ್ತು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ (PMMSY)ಯ ಪ್ರಮುಖ ಸಾಧನೆಗಳು ಯಾವುವು; ವಿಶೇಷವಾಗಿ ಮೀನು ಉತ್ಪಾದನೆ ಮತ್ತು ಮೀನುಗಾರರ ಜೀವನೋಪಾಯವನ್ನು ಹೆಚ್ಚಿಸುವಲ್ಲಿಯ, ಸಾಧನೆಗಳು ಯಾವುವು; | ಕರ್ನಾಟಕದಲ್ಲಿ ನೀಲಿಕ್ರಾಂತಿ ಯೋಜನೆ ಮತ್ತು ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಮೀನು ಉತ್ಪಾದನೆ ಮತ್ತು ಮೀನುಗಾರರ ಜೀವನೋಪಾಯವನ್ನು ಹೆಚ್ಚಿಸಲು ವಿವಿಧ ಘಟಕಗಳಡಿ ಸಹಾಯಧನ ನೀಡಲಾಗುತ್ತಿದ್ದು, ಪ್ರಮುಖ ಸಾಧನೆಗಳ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಸಮುದ್ರ ಜೀವವೈವಿಧ್ಯತೆಯನ್ನು ಸಂರಕ್ಷಿಸಲು ಮತ್ತು ಅತಿಯಾದ ಮೀನುಗಾರಿಕೆಯನ್ನು ತಡೆಯಲು ಇಲಾಖೆಯು ಸುಸ್ಥಿರ ಮೀನುಗಾರಿಕೆ ವಿಧಾನಗಳನ್ನು ಹೇಗೆ ಉತ್ತೇಜಿಸುತ್ತಿದೆ; | ಸಮುದ್ರ ಜೀವವೈವಿಧ್ಯತೆಯನ್ನು ಸಂರಕ್ಷಿಸಲು ಮತ್ತು ಅತಿಯಾದ ಮೀನುಗಾರಿಕೆಯನ್ನು ತಡೆಯಲು ಇಲಾಖೆಯು ಈ ಕೆಳಗಿನ ಸುಸ್ಥಿರ ಮೀನುಗಾರಿಕೆ ವಿಧಾನಗಳನ್ನು ಅನುಸರಿಸುತ್ತಿದೆ.<br>1) ಮೀನಿನ ಸಂತಾನೋತ್ಪತ್ತಿಯನ್ನು ಸಂರಕ್ಷಿಸಲು ಯಾಂತ್ರೀಕೃತ ಮೀನುಗಾರಿಕೆ ಚಟುವಟಿಕೆಗಳನ್ನು ಪ್ರತಿವರ್ಷ ಜೂನ್ 01 ರಿಂದ ಜುಲೈ 31 ರವರೆಗೂ (ಉಭಯ ದಿನಗಳು ಸೇರಿ) ಒಟ್ಟು 61 ದಿನಗಳ ಮೀನುಗಾರಿಕೆ ನಿಷೇಧವನ್ನು ಹೇರಲಾಗುತ್ತಿದೆ.<br>2) ಅವೈಜ್ಞಾನಿಕ ಪದ್ಧತಿಯಾದ ಬುಲ್‌ಟ್ರಾಲಿಂಗ್, ಬೆಳಕು ಮೀನುಗಾರಿಕೆ, ಚೌರಿ ಹಾಕಿ ಬೊಂಡಾಸ್ ಹಿಡಿಯುವುದನ್ನು ನಿಷೇಧಿಸಿದೆ.<br>3) ದೋಣಿಗಳ ಇಂಜಿನ್ ಅಳವಡಿಕೆಯಲ್ಲಿ ಅಶ್ವಶಕ್ತಿಯನ್ನು ಗರಿಷ್ಟ 350 ಹೆಚ್‌ಪಿ ಗೆ ಸೀಮಿತಗೊಳಿಸಿದೆ.<br>4) ಎಲ್ಲಾ ದೋಣಿಗಳ ನೋಂದಣಿ ಮತ್ತು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ.<br>5) ಮರಿ ಮೀನುಗಳ ಹಿಡುವಳಿಯನ್ನು ತಡೆಗಟ್ಟಲು 19 ಜಾತಿಯ ಮೀನುಗಳಿಗೆ ಕನಿಷ್ಟ ಗಾತ್ರ ನಿಗದಿಗೊಳಿಸಿ ಆದೇಶಿಸಲಾಗಿದೆ.<br>6) ಸಣ್ಣ ಮೀನುಗಳ ಹಿಡುವಳಿ ಆಗದಂತೆ ತಡೆಗಟ್ಟಲು ಟ್ರಾಲ್ ದೋಣಿಗಳಲ್ಲಿ 35 ಎಂಎಂ ಗಿಂತ ಕಡಿಮೆ ಕಣ್ಣಿನ ಬಲೆಗಳ ಉಪಯೋಗವನ್ನು ನಿಷೇಧಿಸಲಾಗಿದೆ.<br>7) ಕಡಲಾಮೆ ಹಿಡುವಳಿಯಾಗದಂತೆ ತಡೆಗಟ್ಟಲು ಮತ್ತು ಸಂರಕ್ಷಿಸಲು ಟ್ರಾಲ್‌ಬಲೆಗಳಲ್ಲಿ ಕಡಲಾಮೆಯನ್ನು ಹೊರಗಿಡುವ ಸಾಧನ Turtle Excluding Devices (TED)) ಅಳವಡಿಕೆ ಕಡ್ಡಾಯಗೊಳಿಸಲಾಗಿದೆ.<br>8) ಕಾನೂನು ಉಲ್ಲಂಘನೆ ಪ್ರಕರಣಗಳಿಗೆ ಕರ್ನಾಟಕ ಕಡಲು ಮೀನುಗಾರಿಕೆ ನಿಯಂತ್ರಣ ಕಾಯ್ದೆ, 1986ರ ಪ್ರಕಾರ ದಂಡ ವಿಧಿಸಲಾಗುತ್ತಿದೆ. |

<table>
<tr><td>ಇ)</td><td>ಮೀನು ಸಾಕಣೆ, ಸಂಗ್ರಹಣೆ ಮತ್ತು ಸಾಗಣೆಯನ್ನು ಹೆಚ್ಚಿಸಲು ಕರ್ನಾಟಕದ ಕರಾವಳಿ ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಯಾವ ಮೂಲ ಸೌಕರ್ಯ ಅಭಿವೃದ್ಧಿಗಳನ್ನು ಮಾಡಲಾಗಿದೆ;</td><td>ಮೀನು ಸಾಕಣೆಯನ್ನು ಹೆಚ್ಚಿಸಲು ಪಿಎಂಎಸ್‌ಎಸ್‌ವೈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಒಟ್ಟು 1324 ಹೆಕ್ಟೇರ್ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ. ಅಲ್ಲದೆ, ಆಧುನಿಕ ಮೀನು ಕೃಷಿ ಪದ್ಧತಿಗಳಾದ ಬಯೋಫ್ಲಾಕ್ ಕೊಳಗಳು (284 ಘಟಕಗಳು), ಆರ್‌ಎಎಸ್ / ಬಯೋಫ್ಲಾಕ್ (382 ಘಟಕಗಳು) ಪಂಜರ ಮೀನು ಕೃಷಿ (498 ಘಟಕಗಳು) ಗಳಿಗೆ ಸಹಾಯಧನ ನೀಡಲಾಗಿದೆ.<br><br>ಮೀನು ಸಂಗ್ರಹಣೆ ಮತ್ತು ಜೋಪಾಸನೆಗಾಗಿ 10 ಟನ್ ಸಾಮರ್ಥ್ಯದ 9, 20 ಟನ್ ಸಾಮರ್ಥ್ಯದ 8, 30 ಟನ್ ಸಾಮರ್ಥ್ಯದ 15 ಹಾಗೂ 50 ಟನ್ ಸಾಮರ್ಥ್ಯದ 28 ಮಂಜುಗಡ್ಡೆ ಸ್ಥಾವರಗಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.<br><br>ಮೀನು ಸಾಗಾಣಿಕೆ ಮತ್ತು ಮಾರಾಟಕ್ಕಾಗಿ 22 ರೆಫ್ರಿಜರೇಟೆಡ್ ವಾಹನ, 133 ಶಾಖನಿರೋಧಕ ವಾಹನ, 122 ತ್ರಿಚಕ್ರ ವಾಹನ, 377 ದ್ವಿಚಕ್ರ ವಾಹನಗಳ ಖರೀದಿಗೆ ಸಹಾಯಧನ ನೀಡಲಾಗಿದೆ.</td></tr>
<tr><td>ಈ)</td><td>ಕರ್ನಾಟಕ ಒಟ್ಟು ಮೀನು ಉತ್ಪಾದನೆ ಎಷ್ಟು ಮತ್ತು ಅದು ಭಾರತದ ಒಟ್ಟಾರೆ ಸಮುದ್ರಹಾರ ಉತ್ಪಾದನೆಗೆ ಎಷ್ಟರ ಮಟ್ಟಿಗೆ ಕೊಡುಗೆ ನೀಡುತ್ತಿದೆ; ಈ ಉತ್ಪಾದನೆಯನ್ನು ಹೆಚ್ಚಿಸಲು ಯಾವ ಪ್ರಯತ್ನಗಳು ನಡೆಯುತ್ತಿವೆ?</td><td>2024-25ನೇ ಸಾಲಿನಲ್ಲಿ ಕರ್ನಾಟಕದ ಮೀನು ಉತ್ಪಾದನೆ ಈ ಕೆಳಗಿನಂತಿದೆ.<br><br><table><tr><td>ಕರಾವಳಿ (ಸಮುದ್ರ)</td><td>5.13 ಲಕ್ಷ ಮೆಟ್ರಿಕ್ ಟನ್</td></tr><tr><td>ಒಳನಾಡು</td><td>4.50 ಲಕ್ಷ ಮೆಟ್ರಿಕ್ ಟನ್</td></tr><tr><td>ಒಟ್ಟು</td><td>9.63 ಲಕ್ಷ ಮೆಟ್ರಿಕ್ ಟನ್</td></tr></table><br>ಭಾರತ ಸರ್ಕಾರದಿಂದ 2022-23 ನೇ ಸಾಲಿನ ಅಂಕಿ ಅಂಶಗಳು ಲಭ್ಯವಿದ್ದು, ಸದರಿ ಅಂಕಿ ಅಂಶಗಳ ಪ್ರಕಾರ ಭಾರತದ ಒಟ್ಟಾರೆ ಸಮುದ್ರ ಆಹಾರ ಉತ್ಪಾದನೆಗೆ ಕರ್ನಾಟಕವು 17.68% ರಷ್ಟು ಕೊಡುಗೆ ನೀಡಿದೆ. ಒಟ್ಟು ಮೀನು ಉತ್ಪಾದನೆಯನ್ನು ಹೆಚ್ಚಿಸಲು ಸುಸ್ಥಿರ ಮೀನುಗಾರಿಕಾ ವಿಧಾನಗಳನ್ನು ಅನುಸರಿಸುವುದರ ಜೊತೆಗೆ ಮೇಲೆ (ಅ) ಮತ್ತು (ಇ)ಯಲ್ಲಿ ತಿಳಿಸಿರುವಂತೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಪಸಂಮೀ ಇ-198 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-340ರ



ಅನುಬಂಧ

ಕಳೆದ 5 ವರ್ಷಗಳಲ್ಲಿ ನೀಲಿಕ್ರಾಂತಿ ಮತ್ತು ಪಿಎಂಎಂಎಸ್‌ವೈ ಯೋಜನೆಯಡಿ ಮೀನು ಉತ್ಪಾದನೆಯನ್ನು ಹಾಗೂ ಮೀನುಗಾರರ ಜೀವನೋಪಾಯವನ್ನು ಹೆಚ್ಚಿಸುವಲ್ಲಿಯ ಪ್ರಮುಖ ಸಾಧನೆಗಳು

ರೂ ಲಕ್ಷಗಳಲ್ಲಿ

| ಕ್ರ.ಸಂ | ಘಟಕದ ವಿವರ | ಭೌತಿಕ | ಆರ್ಥಿಕ ವಿವರ |
|---|---|---|---|
| 1 | ಹೊಸ ಮೀನುಕೃಷಿ ಕೊಳಗಳ ನಿರ್ಮಾಣ | 1324 ಹೆ | 4758.78 |
| 2 | ಹೊಸ ಮೀನು ಮರಿ ಪಾಲನಾ ಕೊಳಗಳ ನಿರ್ಮಾಣ | 52 ಹೆ | 171.80 |
| 3 | ಸಿಹಿನೀರಿನಪ್ರದೇಶಗಳಿಗೆ ಬಯೋಫ್ಲೋಕ್ ಕೊಳಗಳ ನಿರ್ಮಾಣ, | 284 | 2150.59 |
| 4 | ದೊಡ್ಡಆರ್‌ಎಎಸ್/ಬಯೋಫ್ಲಾಕ್ ಸ್ಥಾಪನೆ | 130 | 3735.90 |
| 5 | ಮಧ್ಯಮ ಆರ್‌ಎಎಸ್/ಬಯೋಫ್ಲಾಕ್ ಸ್ಥಾಪನೆ | 120 | 1684.86 |
| 6 | ಸಣ್ಣ ಆರ್‌ಎಎಸ್/ಬಯೋಫ್ಲಾಕ್ ಸ್ಥಾಪನೆ | 132 | 502.96 |
| 7 | ಪಂಜರ ಮೀನು ಕೃಷಿ ಘಟಕಗಳು | 498 | 717.87 |
| 8 | ಶಾಖನಿರೋಧಕ ವಾಹನಗಳು | 133 | 1388.76 |
| 9 | ರೆಫ್ರಿಜರೇಟೆಡ್ ವಾಹನಗಳು | 22 | 305.00 |
| 10 | ಐಸ್ ಬಾಕ್ಸ್ ನೊಂದಿಗೆ ಮೋಟಾರ್ ಸೈಕಲ್ | 377 | 144.68 |
| 11 | ಮೀನುಮಾರಾಟಕ್ಕಾಗಿ ಇ-ರಿಕ್ಷಾಗಳನ್ನು ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ ವಾಹನ | 122 | 191.33 |
| 12 | ಜೀವಂತ ಮೀನು ಮಾರಾಟ ಕೇಂದ್ರಗಳು | 34 | 391.56 |
| 13 | ಮೀನು  ಮಾರಾಟ ಕಿಯೋಸ್ಕ್ | 57 | 374.83 |
| 14 | ಆಳ ಸಮುದ್ರ ಮೀನುಗಾರಿಕಾ ದೋಣಿಗಳ ನಿರ್ಮಾಣ | 40 | 1651.00 |
| 15 | ಹಳೆಯ ಮರದ ದೋಣಿಗಳ ಬದಲಿಗೆ ಎಫ್‌ಆರ್ ಪಿ ದೋಣಿಗಳ ನಿರ್ಮಾಣ | 164 | 348.69 |
| 16 | 10ಟನ್ ಸಾಮರ್ಥ್ಯದ ಮಂಜುಗಡ್ಡೆ ಸ್ಥಾವರ/ಶೀಥಲೀಕರಣ ಘಟಕ ನಿರ್ಮಾಣ | 9 | 176.00 |
| 17 | 20ಟನ್ ಸಾಮರ್ಥ್ಯದ ಮಂಜುಗಡ್ಡೆ ಸ್ಥಾವರ/ಶೀಥಲೀಕರಣ ಘಟಕ ನಿರ್ಮಾಣ | 8 | 303.42 |
| 18 | 30ಟನ್ ಸಾಮರ್ಥ್ಯದ ಮಂಜುಗಡ್ಡೆ ಸ್ಥಾವರ/ಶೀಥಲೀಕರಣ ಘಟಕ ನಿರ್ಮಾಣ | 15 | 944.00 |
| 19 | 50ಟನ್ ಸಾಮರ್ಥ್ಯದ ಮಂಜುಗಡ್ಡೆ ಸ್ಥಾವರ/ಶೀಥಲೀಕರಣ ಘಟಕ ನಿರ್ಮಾಣ | 28 | 2178.00 |

ಮೀನುಗಾರಿಕೆ ನಿರ್ದೇಶಕರು